**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಎಂ.ವಿ.ಸಿ. 954/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶೋಭಾ.ಜಿ. | ಆರ್.ಡಬ್ಲ್ಯೂ.3 |
| ತಂದೆಯ/ಗಂಡನ ಹೆಸರು | : | ಮೋಹನ್ ಕುಮಾರ್.ಜಿ.ಆರ್ | |
| ವಯಸ್ಸು | : | 40 ವರ್ಷ | |
| ಕೆಲಸ | : | ವಾಹನ ತಪಾಸಣ ನಿರೀಕ್ಷಕರು, | ಸಾ ಪ್ರ ಬೋ |
| ವಾಸ | : | ಹಾಸನ | ದಿಃ07.01.2026 |

**ಮುಖ್ಯ ವಿಚಾರಣೆ 2 ನೇ ಎದುರುದಾರರ ಪರ : ಶ್ರೀ ಹೆಚ್.ವಿ.ಎಸ್. ಯವರಿಂದಃ**

1. ನಾನು ಜುಲೈ 2025 ಇಲ್ಲಿಯವರೆಗೆ ತರಿಕೆರೆಯ ಸಹಾಯಕ ಪ್ರಾಧೇಶಿಕ ಸಾರಿಗೆ ಕಛೇರಿಯಲ್ಲಿ ಹಿರಿಯ ವಾಹನ ತಪಾಸಣ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ನನಗೆ ಈ ಪ್ರಕರಣದಲ್ಲಿ ಕೆ.ಎ.08-7622 ರ ವಾಹನದ ಅರ್ಹತಾ ಪ್ರಮಾಣ ಪತ್ರವನ್ನು ಪಡೆದಿರುವ ದಾಖಲಾತಿಯನ್ನು ಹಾಜರುಪಡಿಸುವಂತೆ ಸೂಚಿಸಿದ್ದು, ಆ ಪ್ರಕಾರ ಇಂದು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯಂತೆ ಕೆ.ಎ.08-7622 ರ ವಾಹನಕ್ಕೆ ದಿ.16.02.2022 ರಂದು ಅರ್ಹತಾ ಪ್ರಮಾಣ ಪತ್ರವನ್ನು ವಿತರಿಸಿದ್ದು, ಸದರಿ ಅವಧಿಯು ದಿ.15.02.2024 ಕ್ಕೆ ಮುಕ್ತಾಯಗೊಂಡಿರುತ್ತದೆ. ತದನಂತರದಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ನವೀಕರಿಸಿಕೊಂಡಿರುವುದಿಲ್ಲ. ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು ನಿ.ಆರ್.3 ಮತ್ತು 4 ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ಅಪಘಾತ ಏರ್ಪಟ್ಟ ದಿನದಂದು ಅಂದರೆ ದಿ.15.02.2022 ರಂದು ಕೆ.ಎ.08-7622 ರ ಟಾಟಾ ಏಸ್ ಗೂಡ್ಸ್ ವಾಹನಕ್ಕೆ ಅರ್ಹತಾ ಪ್ರಮಾಣ ಪತ್ರ ಇರಲಿಲ್ಲ.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಪಿ.ಆರ್. ಯವರಿಂದಃ**

3. ಅರ್ಹತಾ ಪ್ರಮಾಣ ಪತ್ರದ ಕಾಲವಾಧಿ ಮುಗಿದ ನಂತರ ನವೀಕರಿಸಿಕೊಳ್ಳಲು ಯಾವುದೇ ಅವಧಿ ಇರುವುದಿಲ್ಲ. ಕೆ.ಎ.08-7622 ರ ಟಾಟಾ ಏಸ್ ಗೂಡ್ಸ್ ವಾಹನದ ಅರ್ಹತಾ ಪ್ರಮಾಣಪತ್ರದ ಅವದಿ ದಿ.20.01.2022 ಕ್ಕೆ ಮುಕ್ತಾಯಗೊಂಡಿದ್ದು, ದಿ.16.02.2022 ರಂದು ನವೀಕರಿಸಿಕೊಂಡಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ